**1ನೇ ಹೆಚ್ಚುವರಿ ಸಿವಿಲ್ ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 2039/2024**

| ಪಿರ್ಯಾದುದಾರರು : | ವಿರುದ್ಧ | ಆರೋಪಿತರು: |
|---|---|---|
| ಚನ್ನಗಿರಿ ಪೊಲೀಸ್ ಠಾಣೆ | | ಎ1. ಮಹಮ್ಮದ್ ನಿಹಾಲ್ ಯಾನೇ ಗಜನಿ ಬಿನ್ ಮಹಮ್ಮದ್ ಯಾನೇ ಅಬ್ದುಲ್ ರೆಹಮಾನ್<br>ವಯಸ್ಸುಃ 22 ವರ್ಷ<br>ವಾಸಃ ಟಿಪ್ಪುನಗರ, 1ನೇ ಕ್ರಾಸ್ ಚನ್ನಗಿರಿ,<br>ಎ2. ರೋಶನ್ ಖಾನ್ ಬಿನ್ ಗಫರ್ ಖಾನ್<br>ವಯಸ್ಸುಃ 20 ವರ್ಷ<br>ವಾಸ: ಕೌಸರ್ ಮಸೀದಿ ಹತ್ತಿರ , ಲಷ್ಕ್‌ರ್ ಮೊಹಲ್ಲಾ ಚನ್ನಗಿರಿ ನಗರ<br>ಎ3. ಮಹಮ್ಮದ್ ಸವೀರ್ ಬಿನ್ ಮಹಮ್ಮದ್ ಇಬ್ರಾಹಿಂ<br>ವಯಸ್ಸುಃ 20 ವರ್ಷ<br>ವಾಸಃ ಲಷ್ಕರ್ ಮೆಹಲ್ಲಾ ಚನ್ನಗಿರಿ ಗೌನ್<br>ಎ.4 ಮಹಮ್ಮದ್ ಅಬು ತಲೆಹಾ ಯಾನೇ ಶೇಕ್ ತಲೆಹಾ ಬಿನ್ ಶೇಕ್ ರೆಹಮತುಲ್ಲಾ<br>ವಯಸ್ಸುಃ 20 ವರ್ಷ ಕೌಸರ್ ಮಸೀದಿ ಹತ್ತಿರ 1 ನೇ ಕ್ರಾಸ್ ಚನ್ನಗಿರಿ ಟೌನ್ |

**<u>ದೋಷಾರೋಪಣೆ</u>**

**ನಾನು ಶ್ರೀಮತಿ ಮಹಾಲಕ್ಷ್ಮೀ ಜಿ 1**ನೇ ಹೆಚ್ಚುವರಿ ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗೆ ಗುರಿಪಡಿಸುತ್ತೇನೆ.

ಮೊದಲನೆಯದಾಗಿ ದಿಃ 01-04-2025ರಂದು ರಾತ್ರಿ 9.15ರ ಸಮಯದಲ್ಲಿ ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಬುಸ್ಸೇನಹಳ್ಳಿ ಗ್ರಾಮದ ಮಂಗಜ್ಜರ ಅಜ್ಜಯ್ಯನವರ ಅಡಿಕೆ ತೋಟದ ಮಧ್ಯ ಹಾದುಹೋಗಿರುವ ಚನ್ನಗಿರಿ-ಅಗರಬನ್ನಿಹಟ್ಟಿ ಗ್ರಾಮದ ಸಾರ್ವಜನಿಕ ಟಾರ್ ರಸ್ತೆಯಲ್ಲಿ ಆರೋಪಿತರಾದ ನೀವು ದರೋಡೆ ಮಾಡಲು ಸಂಚು ರೂಪಿಸಿದ್ದು ಅದರಂತೆ 1 ರಿಂದ 3 ನೇ ಆರೋಪಿತರು 2 ನೇ ಅರೋಪಿಯ ಬಾಬ್ತಾದ ಕೆಎ-35/ಹೆಚ್-6699 ಹಿರೋ ಹೊಂಡಾ ಸ್ಪ್ಲೆಂಡರ್ ಪ್ಲಸ್ ಬೈಕಿನಲ್ಲಿ ಚನ್ನಗಿರಿ ಕಡೆಯಿಂದ ಮುದ್ದೆನಹಳ್ಳಿ ಕಡೆಯಿಂದ ಅಗರಬನ್ನಿಹಟ್ಟಿ ಗ್ರಾಮದ ಕಡೆಗೆ ಹೋಗುವ ರಸ್ತೆಯ ಮುಖಾಂತರ ಬುಸ್ಸೇನಹಳ್ಳಿ ಕ್ರಾಸ್ ಹತ್ತಿರವಿರುವ ತೋಟದ ಪಕ್ಕ ಬೈಕ್ ನ್ನು ನಿಲ್ಲಿಸಿಕೊಂಡಿದ್ದು, ಚಾಸಾ-1 ರವರು ಚನ್ನಗಿರಿ ಕಡೆಯಿಂದ

ಅಗರಬನ್ನಿಹಟ್ಟಿ ಗ್ರಾಮದ ಕಡೆಗೆ ಹೋಗಲು ತಮ್ಮ ಬೈಕಿನಲ್ಲಿ ಬರುತ್ತಿದ್ದಾಗ ಆತನ ಬೈಕ್ ನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿ ತಮ್ಮ ಬೈಕಿನಲ್ಲಿ ಪೆಟ್ರೋಲ್ ಖಾಲಿಯಾಗಿದೆ ಎಂದು ಚಾಸಾ-1 ರವರಿಗೆ ಹೇಳಿದ್ದು, ಆತ ತನ್ನ ಮೊಬೈಲ್ ಟಾರ್ಚ್ ನ್ನು ಆನ್ ಮಾಡಿಕೊಂಡು ಬರುತ್ತಿದ್ದಾಗ 1ನೇ ಅರೋಪಿಯಾದ ನೀನು ಆತನ ಮೊಬೈಲ್ ನ್ನು ಕಿತ್ತುಕೊಂಡು 3 ನೇ ಆರೋಪಿಯ ಕೈಗೆ ಕೊಟ್ಟಿದ್ದು, 1 ಮತ್ತು 2ನೇ ಅರೋಪಿತರಾದ ನೀವು ಚಾಸಾ-1 ರವರಿಗೆ ಸುಲಿಗೆ ಮಾಡುವ ಉದ್ದೇಶದಿಂದ ಅವರ  ಹತ್ತಿರ ಬಂಗಾರದ ಆಭರಣ ಹಾಗೂ ನಗದು ಹಣ ಸಿಕ್ಕದ ಕಾರಣ ಅವರನ್ನು ಸ್ಥಳದಲ್ಲಿಯೇ ಬಿಟ್ಟು ಪರಾರಿಯಾಗಿರುತ್ತೀರಿ ಆದ್ದರಿಂದ  ನಿಮ್ಮ  ವಿರುದ್ದ  ಭಾ.ನ್ಯಾ.ಸಂ. 309(4) ಮತ್ತು 61(2)  ಸಹವಾಚಕ ಕಲಂ 3(5) ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಸ್ಥಳಃ ಚನ್ನಗಿರಿ.

ದಿನಾಂಕಃ  17-07-2025

**(ಶ್ರೀಮತಿ ಮಹಾಲಕ್ಷ್ಮೀ ಜಿ )**
**1ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ, ನ್ಯಾಯಾಲಯದಲ್ಲಿ**

**<u>ಸಿಸಿ ನಂ:</u> 2039/2024**

1. **ಕರ್ನಾಟಕ ಸರ್ಕಾರ (ಚನ್ನಗಿರಿ ಪಿ.ಎಸ್ )**

**ವಿರುದ್ಧ**

ಎ.4 ಮಹಮ್ಮದ್ ಅಬು ತಲೆಹಾ ಯಾನೇ ಶೇಕ್ ತಲೆಹಾ ಬಿನ್ ಶೇಕ್ ರೆಹಮತುಲ್ಲಾ

ವಯಸ್ಸುಃ 20 ವರ್ಷ

## <u>ಆರೋಪಿಯ ಹೇಳಿಕೆ</u>

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತಳಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 17-07-2025 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

ದಿನಾಂಕ:17-07-2025

**(ಶ್ರೀಮತಿ ಮಹಾಲಕ್ಷ್ಮೀ ಜಿ )**
**1ನೇ ಹೆಚ್ಚುವರಿ ಪ್ರ.ದ.ನ್ಯಾ , ದಂಡಾಧಿಕಾರಿ,**
**ಚನ್ನಗಿರಿ.**